ಹಸಿಮೇವು ಹಾಕೋದು, ನೀರು ಮುಸುರೆ ಕುಡಿಸೋದು, ಮೈ ಉಜ್ಜೋದು, ಅದರ ಜೊಲ್ಲು ಸಿಂಬಳ ಸೀಟಿ ಬಟ್ಟೇಲಿ ಒರೆಸೋದು, ಸಗಣಿ ಗಂಜಲ ಬಳಿದು ಕೊಟ್ಟಿಗೆಯನ್ನು ಆಗಾಗ ತೊಳೆದು ಶುಚಿ ಮಾಡೋದು ಮಾಡುತ್ತಿದ್ದರು. ಅವರೆಲ್ಲರ ಆರೈಕೆಯಿಂದ ಹಸು ದಿನವೊಂದಕ್ಕೆ ಇಪ್ಪತ್ತು ಲೀಟರ್‌ಗೆ ಕಡಿಮೆಯಿಲ್ಲದಂತೆ ಹಾಲು ಕೊಡುತ್ತಿತ್ತು. ಆದರೆ, ಚಿಕ್ಕಮ್ಮನ ಮನೆಯವರು ಹಸು ತಿನ್ನುವ ಆಹಾರದ ಪ್ರಮಾಣ ಕಂಡು ಕಂಗಾಲಾಗಿ ಹೋದರು. “ಯವ್ವಾ ಇದೇನೇ ಇದು. ನಾಲ್ಕು ಎಮ್ಮೆ ಮೇವು ಒಂದೇ ತಿಂತತಿ” ಎಂದು ಲೋಕಿ ಮಕ್ಕಳು ಆಶ್ಚರ್ಯ ವ್ಯಕ್ತಪಡಿಸಿದರು. ಪ್ರತಿಯೊಂದನ್ನೂ ಕೊಂಡು ತರುತ್ತಿದ್ದ ಅವರಿಗೆ ಹಸು ಸಾಕಾಣಿಕೆ ಅಷ್ಟೇನೂ ಲಾಭದಾಯಕವಾಗಿ ಕಾಣಿಸಲಿಲ್ಲ.

ಹಸು ಬಂದು ಎರಡು ತಿಂಗಳಾಗಿತ್ತು. ಬ್ಯಾಂಕಿನವರು ಕೇಳಲಿ ಬಿಡಲಿ ಚಿಕ್ಕಮ್ಮ ಹಾಲಿನಿಂದ ಬಂದ ದುಡ್ಡನ್ನು ಕಾಸಿಗೆ ಕಾಸು ಸೇರಿಸಿ ಸಾಲದ ಎರಡು ಕಂತುಗಳನ್ನು ಬ್ಯಾಂಕಿಗೆ ಕಟ್ಟಿ ಬಂದಳು. ಇಷ್ಟರಲ್ಲಿಯೇ ಹಸು ಹೀಟಿಗೆ ಬಂದರೆ ಗರ್ಭವಾಗಲು ವೀರ್ಯ ಕೊಡಿಸಬೇಕೆಂದು ಮನೆಯಲ್ಲಿ ಮಾತಾಡಿಕೊಂಡರು. ಡಾಕ್ಟ್ರನ್ನು ವಿಚಾರಿಸಲಾಗಿ ಅವರು ಹಸುಗೆ ದೈಹಿಕ ಚಟುವಟಿಕೆಯ ಅವಶ್ಯಕತೆಯ ಬಗ್ಗೆ ತಿಳಿಸಿ, ದಿನಕ್ಕೆ ಮೂರ್ನಾಲ್ಕು ಕಿಲೋಮೀಟರ್ ನಡೆದಾಡಿಸಬೇಕೆಂದರು.

ಡಾಕ್ಟರ ಸಲಹೆಯ ಪ್ರಕಾರ ಹಸುವನ್ನು ದಿನವೂ ನಡೆದಾಡಿಸುತ್ತಿದ್ದರು. ಚಿಕ್ಕಮ್ಮ ತನ್ನ ತೆಂಗಿನಮರಗಳ ನಡುವೆ ಮೇವು ಬೆಳೆಯಲು ಕಾಲು ಎಕರೆಯಷ್ಟು ಭೂಮಿ ಇತ್ತು. ಆದರೆ,

